ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸುನಿಲ್ ದತ್ ಯಾದವ್

ಶ್ರೀಮತಿ ಕೆ. ಗಾಯತ್ರಿ ಮಲ್ಯ ವಿರುದ್ಧ ವ್ಯವಸ್ಥಾಪಕರು, ಅರ್ಬನ್ ಸಹಕಾರಿ ಬ್ಯಾಂಕ್ ಅಮಿಟೆಡ್ ಸಿದ್ಧಾಪುರ (ಯು.ಕೆ.)

ರಿಟ್ ಅರ್ಜಿಸಂಖ್ಯೆ: 27470/2015, ದಿನಾಂಕ 10 ನೇ ಡಿಸೆಂಬರ್, 20 ಕರ್ನಾಟಕ ತೀರ್ಪುಗಳ ವರದಿ 2020

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್:

2 ನೇ ತೀರ್ಪು ಋಣಿಯಾಗಿರುವ ಅರ್ಜಿದಾರನು ಅಧೀನ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ 90 ನೇ ನಿಯಮದ XXI ನೇ ಕ್ರಮಾದೇಶದ ಅಡಿಯಲ್ಲಿ ದಾಖಲಿಸಿದ ಐ.ಎ.ಸಂಖ್ಯೆ:7 ರಲ್ಲಿ ಮಾರಾಟವನ್ನು ರದ್ದುಪಡಿಸುವಂತೆ ದಾಖಲಿಸಿದ ಅರ್ಜಿಯನ್ನು ವಜಾಗೊಳಿಸಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿರುತ್ತಾನೆ.

2. ಅಂಗೀಕರಿಸಲಾದ ಸಂಗತಿಗಳು ಹೀಗಿದೆ.1 ನೇ ತೀರ್ಪು ಋಣಿಯಾಗಿರುವ 4 ನೇ ಪ್ರತ್ಯರ್ಜಿದಾರನು ಮೊದಲ ಪ್ರತ್ಯರ್ಜಿದಾರನಾದ ಬ್ಯಾಂಕ್ನಿಂದ ಸಾಲವನ್ನು ಪಡೆದಿರುವನು ಮತ್ತು ಇದರಲ್ಲಿ ಅರ್ಜಿದಾರನಾಗಿರುವ 2 ನೇ ತೀರ್ಪು ಋಣಿಯು ಸಾಲದ ಖಾತರಿದಾರನಾಗಿರುವನು.ಈ ಮೊಕದ್ದಮೆಯಲ್ಲಿ ಅರ್ಜಿದಾರನು, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 ರ 70 ನೇ ಪ್ರಕರಣದ ಅಡಿಯಲ್ಲಿ ಐತೀರ್ಪು ಪಡೆದುಕೊಂಡ ತರುವಾಯ ಮತ್ತು ವಸೂಲಾತಿ ಪ್ರಮಾಣಪತ್ರವನ್ನು ಪಡೆದುಕೊಂಡ ತರುವಾಯ, ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ, ಸಾಗರ-ಇದರ ಮುಂದೆ ಐತೀರ್ಪನ್ನು ಕಾರ್ಯಗತಗೊಳಿಸುವುದಕ್ಕೆ ವ್ಯವಹರಣೆಗಳನ್ನು ಹೂಡಿರುವನು.

3. ಅರ್ಜಿದಾರರ ವಾದಾಂಶವೇನೆಂದರೆ, ಸಾಗರದಲ್ಲಿರುವ ನ್ಯಾಯಾಲಯವು, ಶಿವಮೊಗ್ಗದಲ್ಲಿರುವ ಸ್ವತ್ತಿನ ಸಂಬಂಧದಲ್ಲಿ ಡಿಗ್ರಿಯನ್ನು ಜಾರಿಗೊಳಿಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲದಿರುವುದರಿಂದ ಮತ್ತು ಆದಾಗ್ಯೂ ಶಿವಮೊಗ್ಗದಲ್ಲಿರುವ ಸ್ವತ್ತಿಗೆ ಸಂಬಂಧಪಟ್ಟ ಮಟ್ಟಿಗೆ ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದ ಎಲ್ಲ ವ್ಯವಹರಣೆಗಳು ಅಧಿಕಾರ ವ್ಯಾಪ್ತಿಯ ಹೊರಗಿರುವುದರಿಂದ ಮಾರಾಟವನ್ನು ತಳ್ಳಿಹಾಕಲು ಅರ್ಹವಾಗಿದೆ.ಆದುದರಿಂದಲೇ ಸಿವಿಲ್ ಪ್ರಕ್ರಿಯಾ ಸಂಹಿತೆಯ 90 ನೇ ನಿಯಮದ XXI ನೇ ಕ್ರಮಾದೇಶದ ಅಡಿಯಲ್ಲಿನ ಅರ್ಜಿಯನ್ನು ಅನುಮತಿಸ ಬೇಕಾಗಿದೆ ಎಂದು ನಿವೇದಿಸಲಾಗಿರುತ್ತದೆ.

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮೋಹಿತ್ ಭಾರ್ಗವ –ವಿರುದ್ಧ-ಭರತ್ ಭೂಷಣ್ ಭಾರ್ಗವ್ ಮತ್ತು ಇತರರು - ಎ.ಐ.ಆರ್. 2007 ಎಸ್.ಸಿ. 1717, ' ಹಾಗೂ ಕಿರಣ್ ಸಿಂಗ್ ಮತ್ತು ಇತರರು ವಿರುದ್ಧ ಚಮನ್ ಪಾಸ್ವಾನ್ ಮತ್ತು ಇತರರು - ಎ.ಐ.ಆರ್. 1954 ಎಸ್.ಸಿ. 340, ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಸಹ ಆಧಾರವಾಗಿ ನೀಡಿರುವರು.

5. ಮೊದಲ ಪ್ರತ್ಯರ್ಜಿದಾರ ಬ್ಯಾಂಕ್ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಎಸ್.ವಿ. ಪ್ರಕಾಶ್ ಅವರು ನಿವೇದಿಸಿದ ವಾದಾಂಶದಲ್ಲಿ, ನ್ಯಾಯಾಲಯವು ಸ್ವೀಕರ್ತನನ್ನು ಗೊತ್ತುಪಡಿಸುವುದಕ್ಕಾಗಿ ದಾಖಲಿಸಿದ ಅರ್ಜಿಯನ್ನು ನಿರ್ಣಯಿಸುತ್ತಿರುವಾಗ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಪ್ರಶ್ನೆಯನ್ನು ಪರಿಗಣಿಸಲಾಯಿತು ಮತ್ತು ಅಮಲ್ಜಾರಿ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಹೊಂದಿರಲಿಲ್ಲ ಎಂಬುದಾಗಿ 1 ನೇ ತೀರ್ಪುಋಣಿಯು ಎತ್ತಿರುವ ನಿರ್ದಿಷ್ಟ ವಾದಾಂಶವನ್ನು ಸ್ವೀಕರ್ತನನ್ನು ಗೊತ್ತುಪಡಿಸುವ ಆದೇಶವನ್ನು ಹೊರಡಿಸುವಾಗ ಗಮನಕ್ಕೆ ತರಲಾಯಿತು.ಸದರಿ ಆದೇಶದ ಪ್ರತಿಯನ್ನು ಅನುಬಂಧ- ಇ ಯಲ್ಲಿ ಲಗತ್ತಿಸಲಾಗಿದೆ.

6. 1ನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮುಂದುವರೆಸುತ್ತಾ, ಅಧಿಕಾರ ವ್ಯಾಪ್ತಿಗೆ ಬರದಿರುವ ಅದೇ ರೀತಿಯ ವಾದಾಂಶವನ್ನು ಚರ್ಚಿಸಿ 1 ನೇ ತೀರ್ಪು ಋಣಿಯ ಸೂಚನೆಯಂತೆ ಸ್ವತ್ತಿನ ಜಪ್ತಿಯ ಸಂಬಂಧದಲ್ಲಿ ಉದ್ಭವಿಸಿದ್ದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 58 ನೇ ನಿಯಮದ 21 ನೇ ಕ್ರಮಾದೇಶದ ಅಡಿಯಲ್ಲಿ ದಾಖಲಿಸಿದ ಐ.ಎ.ಸಂ .5 ಅರ್ಜಿಯನ್ನು ಸಹ ಪರಿಗಣಿಸುವಾಗ

ಅಮಲ್ದಾರಿ ನ್ಯಾಯಾಲಯವು ಸದರಿ ವಾದಾಂಶವನ್ನು ತಿರಸ್ಕರಿಸಿದೆ.01.07.2014 ನೇ ದಿನಾಂಕದ ಸದರಿ ಆದೇಶದ ಪ್ರತಿಯೊಂದಿಗೆ 1 ನೇ ಪ್ರತ್ಯರ್ಜಿದಾರರ ಆಕ್ಷೇಪಣೆಗಳ ಹೇಳಿಕೆಗಳನ್ನು ಅನುಬಂಧ-ಆರ್ 2 ರಲ್ಲಿ ಲಗತ್ತಿಸಲಾಗಿದೆ.

7. ಒಮ್ಮೆ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನೂ ಹೊಂದಿದೆಯೆಂದು ದಾಖಲಿಸಿದರೆ, ಅದೇ ವ್ಯವಹರಣೆಗಳಲ್ಲಿ ನಂತರದ ಸಮಯದಲ್ಲಿ ಅಂಥ ನಿರ್ಣಯವನ್ನು ಟೀಕಿಸುವುದಕ್ಕೆ ಕೋರಿರುವ ಪ್ರಸಕ್ತ ಅರ್ಜಿದಾರರ ಪ್ರಶ್ನೆಯು ಉದ್ಭವಾಗುವುದಿಲ್ಲ ಎಂದು ವಾದಿಸಲಾಗಿದೆ.ಮಾರಾಟವನ್ನು ರದ್ದುಪಡಿಸಲು ಪ್ರಶ್ನಿಸುವುದಕ್ಕಾಗಿ ನೀಡಲಾದ ಕಾಲ ಮಿತಿಯ ಅವಧಿಯು ಮುಕ್ತಾಯವಾಗಿದ್ದು, ನಿಯಮಿಸಲಾದ ಅವಧಿಯನ್ನು ಮೀರಿ ಅರ್ಜಿಯನ್ನು ದಾಖಲಿಸಿರುವುದರಿಂದ ಅದು ಪುರಸ್ಕರಿಸಲು ಅರ್ಹವಾಗಿರುವುದಿಲ್ಲ ಎಂದು ಸಹ ನಿವೇದಿಸಲಾಯಿತು ಮತ್ತು ಸದರಿ ಅರ್ಜಿಯನ್ನು ಅಧೀನ ನ್ಯಾಯಾಲಯವ ತಿರಸ್ಕರಿಸಿರುವುದು ಸರಿಯಾದುದಾಗಿದೆ ಎಂಬುದು ಅವರ ವಾದಾಂಶವಾಗಿದೆ.

8. ಯಾವ ಹರಾಜು ಖರೀದಿದಾರನ ಸ್ವತ್ತಿನ ಮಾರಾಟವು ಪ್ರಶ್ನಿತವಾಗಿದೆಯೋ ಅಂಥ ಹರಾಜು ಖರೀದಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು 1 ನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಅಂಗೀಕರಿಸಿರುತ್ತಾರೆ ಮತ್ತು ಈ ದೀರ್ಘಾವಧಿಯ ತರುವಾಯ ಅಧೀನ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿ ಯಾವುದೆ ಆದೇಶವನ್ನು ಹೊರಡಿಸಿದರೆ, ಈ ಆದೇಶವು ನೈಜ ಖರೀದಿದಾರನಿಗೆ ತೀವ್ರತರವಾದ ಹಾನಿಯುಂಟಾಗುತ್ತದೆ ಎಂಬುದನ್ನು ವಾದಾಂಶದಲ್ಲಿ ನಿವೇದಿಸಿರುತ್ತಾರೆ.

9. 1ನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ 90 ನೇ ನಿಯಮದ 21 ನೇ ಕ್ರಮಾದೇಶದ ಅಡಿಯಲ್ಲಿ ಉಪಬಂಧಿಸಿದ ಕಾರಣಗಳನ್ನು ಹೊರತುಪಡಿಸಿ ಇದರಲ್ಲಿ ಅರ್ಜಿದಾರರು ಎತ್ತಿರುವಂತಹ ಕಾರಣಗಳು ಒಳಗೊಂಡಂತೆ ಈ ಮಾರಾಟವನ್ನು ವಜಾಗೊಳಿಸಿವುದಕ್ಕೆ ನ್ಯಾಯಾಲಯಕ್ಕೆ ಯಾವುದೇ ಅಧಿಕಾರ ವ್ಯಾಪ್ತಿಯು ಇರುವುದಿಲ್ಲ ಎಂದೂ ಸಹ ವಾದಿಸಿರುತ್ತಾರೆ.

10. ಉಭಯ ಪಕ್ಷಕಾರರ ವಾದಗಳನ್ನು ಆಲಿಸಲಾಗಿದೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ 39 ( 4) ನೇ ಪ್ರಕರಣದ ಅಡಿಯಲ್ಲಿ ಎತ್ತಲಾದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಆಕ್ಷೇಪಣೆಗಳು ಯಾವ ರೀತಿಯಲ್ಲಿ ವ್ಯವಹರಿಸಬೇಕಾಗುತ್ತದೆ ಎಂಬುದನ್ನು ಪರಿಗಣಿಸುವಂತೆ ಈ ನ್ಯಾಯಾಲಯವನ್ನು ಕೋರಲಾಗಿದೆ.

11. 1ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸಂಬಂಧದಲ್ಲಿ ಎತ್ತಲಾದ ಪ್ರಶ್ನೆಯು ಸ್ವೀಕರ್ತನನ್ನು ಗೊತ್ತುಪಡಿಸುವುದಕ್ಕೆ ದಾಖಲಿಸಿದ ಅರ್ಜಿಯನ್ನು ನಿರ್ಣಯಿಸುವಾಗ ಪರಿಗಣಿಸುವ ವಸ್ತು ವಿಷಯವಾಗಿತ್ತೆಂದು ನಿರ್ವಿವಾದವಾಗಿ ಸೂಚಿಸಿರುತ್ತಾರೆ.ಅನುಬಂಧ- ಇ ಯಲ್ಲಿನ ಆದೇಶವನ್ನು ಪರಾಮರ್ಶಿಸಿದಾಗ, ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಹೊರಗಿರುವ ಸ್ವತ್ತಿಗೆ ಸಂಬಂಧಿಸಿದಂತೆಯೂ ಸಹ ಸ್ವೀಕರ್ತನನ್ನು ನೇಮಕ ಮಾಡಬಹುದು ಮತ್ತು ಹಾಗೆ ಮಾಡುವಾಗ ಸ್ವೀಕರ್ತನನ್ನು ನೇಮಕ ಮಾಡುವುದಕ್ಕೆ ನ್ಯಾಯಾಲಯದ ಅಧಿಕಾರಕ್ಕೆ ಸಂಬಂಧಿಸಿದ ತೀರ್ಪುಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದು ಕಂಡುಬರುತ್ತದೆ.

12. ಸಿವಿಲ್ ಪ್ರಕ್ರಿಯಾ ಸಂಹಿತೆಯ 39(4) ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಸದರಿ ಆದೇಶದಲ್ಲಿನ ಯಾವುದೇ ನಿರ್ಣಯಗಳು ದಾಖಲಾಗಿರುವುದಿಲ್ಲ.ಮೊದಲ ತೀರ್ಪು ಋಣಿಯ ಪರವಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 58 ನೇ ನಿಯಮದ 21 ನೇ ಕ್ರಮಾದೇಶದ ಅಡಿಯಲ್ಲಿ ಹೊರಡಿಸಿದ ಆದೇಶವನ್ನು ಪರಾಮರ್ಶಿಸಿದಾಗ ಅದೇ ವಾದಾಂಶಕ್ಕೆ ಉತ್ತರ ನೀಡುವಂತೆ ನ್ಯಾಯಾಲಯವನ್ನು ಕೋರಲಾಯಿತೆಂದು ಸಹ ತಿಳಿದುಬರುತ್ತದೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ 39 ( 4) ನೇ ಪ್ರಕರಣವನ್ನು ಉಲ್ಲೇಖಿಸಿದ್ದರೂ ಸಹ ಸೂಕ್ಷ್ಮ ಪರಿಶೀಲನೆಯಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎತ್ತಲಾದ ಆಕ್ಷೇಪಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ನಿರ್ಣಯವಿರುವುದಿಲ್ಲ ಎಂದು ತಿಳಿದುಬರುತ್ತದೆ.

13. ವಾದಾಂಶದ ಸಂಬಂಧದಲ್ಲಿ ಮಾರಾಟವನ್ನು ರದ್ದುಪಡಿಸುವಂತೆ ಸಲ್ಲಿಸಿರುವ ಅರ್ಜಿಯನ್ನು ಕಾಲ ಪರಿಮಿತಿ ಕಾನೂನಿನ ಮೂಲಕ ಪ್ರತಿಬಂಧಿಸಲಾಯಿತೆಂಬ ವಾದಕ್ಕೆ ಸಂಬಂಧಿಸಿದಂತೆ, ಹರಾಜು ಖರೀದಿದಾರನು ಸಂದಾಯವನ್ನು ಮಾಡಿದ್ದರು ಮತ್ತು ತತ್ಪರಿಣಾಮವಾಗಿ ಪ್ರಸ್ತುತ ವ್ಯವಹರಣೆಯ ಇತ್ಯರ್ಥದ ಕಾಲಾವಧಿಯಲ್ಲಿ ಮಾರಾಟವನ್ನು ಸ್ಥಿರೀಕರಿಸಲಾಯಿತು ಎಂದು ಹೇಳಲಾಗಿದೆ.ಇದರ ಹಿನ್ನೆಲೆಯಲ್ಲಿ, ಅಂಥ

ಮಾರಾಟವನ್ನು ಪ್ರಶ್ನಿಸುವುದನ್ನು ಪ್ರತಿಬಂಧಿಸುವ ಕಾಲ ಪರಿಮಿತಿಯ ಪ್ರಶ್ನೆಯು ಮೇಲ್ನೋಟಕ್ಕೆ ಉದ್ಭವಿಸುವುದಿಲ್ಲ.

14. ಅಧೀನ ನ್ಯಾಯಾಲಯದ ಮುಂದಿರುವ ಪ್ರಸಕ್ತ ವ್ಯವಹರಣೆಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 39 ( 4) ನೇ ಪ್ರಕರಣದ ಹಿನ್ನೆಲೆಯಲ್ಲಿ ನಿರ್ವಹಿಸಬಹುದೇ ಎಂಬುದು ಇನ್ನು ಪರಿಗಣಿಸಬೇಕಾದಂತಹ ತುಂಬಾ ಮಹತ್ವದ ಪ್ರಶ್ನೆಯಾಗಿದೆ.39 ನೇ ಪ್ರಕರಣವು ತಿದ್ದುಪಡಿಯಾಗುವ ಮುಂಚೆಯೇ ಸರ್ವೋಚ್ಚ ನ್ಯಾಯಾಲಯವು ಚ ಹೆಸರಾಂತ ಮೊಕದ್ದಮೆಯಾದ ಕಿರಣ್ಸಿಂಗ್ ಮತ್ತು ಇತರರು ವಿರುದ್ಧ ಚಮನ್ ಪಾಸ್ವಾನ್ ಮತ್ತು ಇತರರು - ಎ.ಐ.ಆರ್. 1954 ಎಸ್.ಸಿ. 340, ಮೊಕದ್ದಮೆಯ ನಿರ್ಣಯದಲ್ಲಿ ತುಂಬಾ ಹಿಂದೆಯೇ ಹಣಕಾಸು ಅಥವಾ ಪ್ರಾದೇಶಿಕತೆ ಯಾವುದೇ ಆಗಿರಲಿ ಅದರ ಅಧಿಕಾರ ವ್ಯಾಪ್ತಿ ಇಲ್ಲದಿದ್ದಾಗ ಡಿಕ್ರಿಯನ್ನು ಹೊರಡಿಸುವುದಕ್ಕೆ ನ್ಯಾಯಾಲಯದ ನೈಜ ಅಧಿಕಾರ ವ್ಯಾಪ್ತಿಗೆ ತೊಂದರೆಯಾಗುತ್ತದೆ ಮತ್ತು ಹಾಗೆ ಅಧಿಕಾರ ವ್ಯಾಪ್ತಿ ಇಲ್ಲದಿರುವುದನ್ನು ಪಕ್ಷಕಾರರ ಸಮ್ಮತಿಯ ಮೂಲಕ ಸರಿಪಡಿಸಲಾಗುವುದಿಲ್ಲವೆಂದು ದೃಢವಾಗಿ ಅಭಿಪ್ರಾಯಪಟ್ಟಿದೆ.ಅಮಲ್ದಾರಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಹೊರಗಿರುವ ವ್ಯಕ್ತಿಗೆ ಅಥವಾ ಸ್ವತ್ತಿಗೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಇರುವ ಅಮಲ್ದಾರಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪ್ರಶ್ನೆಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 39(4)ನೇ ಪ್ರಕರಣದ ಮೂಲಕ ಸ್ಪಷ್ಟವಾಗಿ ಪ್ರತಿಬಂಧಿಸಲಾಗಿದೆ.

15. ಅಂಗೀಕರಿಸಿದಂತೆ, ನಿಡಿಗೆ ಹೋಬಳಿಯ ಹಸುಡಿ ಹಳ್ಳಿಯಲ್ಲಿನ ಸರ್ವೆ ನಂ .206 ರಲ್ಲಿರುವ ಸ್ವತ್ತು ಶಿವಮೊಗ್ಗ ತಾಲ್ಲೂಕಿನಲ್ಲಿದ್ದು ಅದು ಸಾಗರದಲ್ಲಿನ ಅಮಲ್ದಾರಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಹೊರಗಿದೆ.ಈ ವಾಸ್ತವಿಕ ಸಂಗತಿ ವಿವಾದಾತ್ಮಕವಾಗಿರುವುದಿಲ್ಲ. ಅರ್ಜಿದಾರರು ಡಿಕ್ರಿಯನ್ನು ಅಮಲ್ದಾರಿಗೊಳಿಸುವಲ್ಲಿ ಆದ ಕೆಲವು ನ್ಯೂನ್ಯತೆಗಳ ಪ್ರಯೋಜನವನ್ನು ಪಡೆಯುವುದಕ್ಕೆ ಪ್ರಯತ್ನಿಸುತ್ತಿದ್ದಾನೆಂಬುದೇ ಒಂದನೇ ಪ್ರತ್ಯರ್ಜಿದಾರನ ವಾದವಾಗಿದೆ.ಅಲ್ಲದೆ, ಅರ್ಜಿದಾರರು ಕೇವಲ ಜಾಮೀನುದಾರನಾಗಿರುವುದರಿಂದ ಅವನು ಮಾರಾಟವನ್ನು, ಯಾವುದೇ ಸ್ವಾಧಿಕಾರವನ್ನು ಪ್ರಶ್ನಿಸುವ ಹಕ್ಕು ಹೊಂದಿರುವುದಿಲ್ಲ.

16. ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಅಡಮಾನ ಮಾಡಲಾಗಿದ್ದ ಸದರಿ ಸ್ವತ್ತು ಅವಿಭಕ್ತ ಕುಟುಂಬದ ಆಸ್ತಿಯಾಗಿರುವುದರಿಂದ, ಹರಾಜಿನ ಪಾಲಾಗಿರುವ ಸ್ವತ್ತಿನ ಬಗ್ಗೆ ಅರ್ಜಿದಾರರು ಹಿತಾಸಕ್ತಿದಾರರಾಗಿರುವರು ಎಂದು ನಿವೇದಿಸಿರುತ್ತಾರೆ.

17. ಆದಾಗ್ಯೂ, ಈಗ ಉದ್ಭವವಾಗಿರುವ ಪ್ರಶ್ನೆಯು, ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗಿರುವ ಯಾರೇ ಪಕ್ಷಕಾರರು ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆಯೇ ಎಂಬುದಾಗಿರುವುದಿಲ್ಲ ಅಥವಾ ನ್ಯಾಯಾಲಯಕ್ಕೆ ತುಂಬಾ ಹಿಂದೆಯೇ ವಾದಿಸಲಾದಂತೆ ಅದು ಅಧಿಕಾರ ವ್ಯಾಪ್ತಿಯನ್ನು ಹೊಂದಿತ್ತೆಂಬುದಾಗಿ ನಿರ್ಣಯಿಸಿತ್ತು ಎಂಬುದೂ ಆಗಿರುವುದಿಲ್ಲ.

ಅಪೀಲಿನ ಅಥವಾ ಪ್ರಸ್ತುತ ಮೊಕದ್ದಮೆಯಲ್ಲಿದ್ದಂತೆ ಭಾರತ ಸಂವಿಧಾನದ 227 ನೇ ಅನುಚ್ಛೇದದ ಅಡಿಯಲ್ಲಿ ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ ವ್ಯವಹರಣೆಗಳ ಯಾವುದೇ ಹಂತದಲ್ಲಿ ಆದೇಶವನ್ನು ಹೊರಡಿಸಿರುವ ನ್ಯಾಯಾಲಯಕ್ಕೆ ಆದೇಶ ಹೊರಡಿಸುವುದಕ್ಕೆ, ಅಥವಾ ಆ ವ್ಯವಹರಣೆಗಳನ್ನು ಮುಂದುವರೆಸುವ ಅಧಿಕಾರ ಇರುವುದಿಲ್ಲ.ಈ ಹಿಂದೆ ಹೊರಡಿಸಿದ ನ್ಯಾಯಾಲಯ ಯಾವುದೇ ಆದೇಶವನ್ನು ಅಧಿಕಾರವ್ಯಾಪ್ತಿಗೆ ಬರದಿರುವುದನ್ನು ನ್ಯಾಯಾಲಯವು ಗಮನಿಸುವುದನ್ನು ತಡೆಯಲಾಗುವುದಿಲ್ಲ.ಅಧಿಕಾರ ವ್ಯಾಪ್ತಿಯ ಗೈರು ಹಾಜರಿಯು ಯಾವುದೇ ನ್ಯಾಯ ಸಮ್ಮತ ಪರಿಗಣನೆಯ ಮೇಲೆ ಅಥವಾ ಯಾವುದೇ ಪಕ್ಷಕಾರರಿಗೆ ಪೂರ್ವಾಗ್ರಹದ ಆಧಾರದ ಮೇಲೆ ವಿಫಲಗೊಳಿಸುವಂತಿಲ್ಲ.ಅಧಿಕಾರ ವ್ಯಾಪ್ತಿಯ ಗೈರುಹಾಜರಿಯ ವಾಸ್ತವಿಕಾಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಾಗ ವ್ಯವಹರಣೆಗಳನ್ನು ನಿಷ್ಪ್ರಯೋಜಕಗೊಳಿಸಿ, ತತ್ಪರಿಣಾಮದ ಆದೇಶಗಳನ್ನು ಹೊರಡಿಸುವುದು ಆ ನ್ಯಾಯಾಲಯದ ಕರ್ತವ್ಯವಾಗಿರುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲಿ ಅಮಲ್ದಾರಿ ನ್ಯಾಯಾಧೀಶರ ಮುಂದೆ ಇರುವ ವ್ಯವಹರಣೆಗಳು ಅಧಿಕಾರ ವ್ಯಾಪ್ತಿಯಿಲ್ಲದ ನ್ಯಾಯಾಲಯಗಳ ಮುಂದೆ ನರಳುತ್ತಿರುವುದು ಸ್ಪಷ್ಟವಾಗಿದೆ.

18. ಜಗಮಿಟ್ಟರ್ ಸೈನ ಭಗತ್ ಮತ್ತು ಇತರರು -ವಿರುದ್ಧ ನಿರ್ದೇಶಕರು, ಆರೋಗ್ಯ ಸೇವೆಗಳು, ಹರಿಯಾಣ ಮತ್ತು ಇತರರು - (2013) 10 ಎಸ್ಸಿಸಿ 136, ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಆಕ್ಷೇಪಣೆಯನ್ನು ಪರಿಗಣಿಸುವ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಸಹ ಬೆಳಕನ್ನು ಚೆಲ್ಲುತ್ತದೆ.

9. ನಿರ್ವಿವಾದವಾಗಿ, ಅಧಿಕಾರ ವ್ಯಾಪ್ತಿಯ ನೀಡಿಕೆಯು ಒಂದು ಶಾಸಕಾಂಗ ಕರ್ತವ್ಯವಾಗಿದೆ ಎಂಬುದು ಇತ್ಯರ್ಥವಾದ ಕಾನೂನು ಪ್ರತಿಪಾದನೆಯಾಗಿದೆ ಮತ್ತು ಈ ಅಧಿಕಾರ ವ್ಯಾಪ್ತಿಯನ್ನು ಪಕ್ಷಕಾರರ ಸಮ್ಮತಿಯೊಂದಿಗಾಗಲೀ, ವರಿಷ್ಠ ನ್ಯಾಯಾಲಯಗಳಿಂದಾಗಲೀ ಪ್ರದತ್ತಗೊಳಿಸಲು ಸಾಧ್ಯವಾಗದು ಮತ್ತು ನ್ಯಾಯಾಲಯವು, ವಸ್ತು ವಿಷಯದ ಮೇಲೆ ಯಾವುದೇ ಅಧಿಕಾರ ವ್ಯಾಪ್ತಿ ಹೊಂದಿರದೆ ಡಿಕ್ರಿಯನ್ನು ಹೊರಡಿಸಿದ್ದರೆ, ವಿಷಯವು ವ್ಯಾಜ್ಯದ ಮೂಲವಾಗುವುದರಿಂದ ಅದು ಅಸಿಂಧುವಾಗುತ್ತದೆ.ವ್ಯವಹರಣೆಯ ಯಾವುದೇ ಹಂತದಲ್ಲಿ ಅಂಥ ವಿವಾದಾಂಶವನ್ನು ಎತ್ತಬಹುದಾಗಿದೆ.ಒಮ್ಮೆ ಅಧಿಕಾರ ವ್ಯಾಪ್ತಿ ಇರುವುದಿಲ್ಲವೆಂದು ಅಂತೆಯೇ ನ್ಯಾಯಾಲಯ| ನ್ಯಾಯಾಧಿಕರಣವು ಅಂತರ್ಗತವಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲದಿರುವುದು ಕಂಡುಬಂದರೆ, ನ್ಯಾಯಾಲಯ ಅಥವಾ ನ್ಯಾಯಾಧಿಕರಣ ನೀಡಿದ ನಿರ್ಣಯವು ಸುಸಂಗತವಾಗಿರುವುದಿಲ್ಲ ಮತ್ತು ಕಾರ್ಯಗತಗೊಳಿಸುವಂತೆ ಇರುವುದಿಲ್ಲ.ಅಂತೆಯೇ ನ್ಯಾಯಾಲಯ/ನ್ಯಾಯಾಧೀಕರಣವು ಅಂತರ್ಗತವಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲದಿದ್ದರೆ, ಪಕ್ಷಕಾರನ ಮೌನ ಸಮ್ಮತಿಯನ್ನು ಶಾಸಕಾಂಗದ ಅಂತಸತ್ವದ ಜೀವಂತಿಕೆಯನ್ನು ವಿಫಲಗೊಳಿಸಿ ಶಾಶ್ವತವಾಗಿ ಮತ್ತು ಸಾರ್ವಕಾಲಿಕವಾಗಿ ಇರಲು ಅನುಮತಿ ನೀಡಬಾರದು.ನ್ಯಾಯಾಲಯವು ಕಾನೂನಿನ ಹೊರತಾಗಿ ಅಧಿಕಾರ ವ್ಯಾಪ್ತಿಯನ್ನು ಪಡೆಯಲು ಸಾಧ್ಯವಿಲ್ಲ.ಅಂಥ ಸಂದರ್ಭದಲ್ಲಿ ಮನ್ನಾ ಸಿದ್ಧಾಂತವು ಸಹ ಅನ್ವಯವಾಗುವುದಿಲ್ಲ (ನೋಡಿ:ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್ -ವಿರುದ್ಧ ವರ್ಕ್ಮನ್, ಎಐಆರ್ 1951 ಎಸ್ಸಿ 230; ನಮ್ ಬಹು -ವಿರುದ್ಧ ಲಾಲ್ ರಾಮ್ ನಾರಾಯಣ್, ಎಐಆರ್ 1978 ಎಸ್ಸಿ 22; ನಟರಾಜ್ ಸ್ಟುಡಿಯೋಸ್ (ಪ್ರೈ) ಲಿಮಿಟೆಡ್ –ವಿರುದ್ಧ ನವರಂಗ್ ಸ್ಟುಡಿಯೋಸ್, ಎಐಆರ್ (1981) 1 ಎಸ್ಸಿ 523 ಮತ್ತು ಕೊಂಡಿಬಾ ದಗಡು ಕದಂ -ವಿರುದ್ಧ ಸಾವಿತ್ರಿಬಾಯಿ ಸೋಪಾನ್ ಗುಜರ್ (1999) 3 ಎಸ್ಸಿಸಿ 722).

19. ಮೊಹಿತ್ ಭಾರ್ಗವ್ -ವಿರುದ್ಧ ಭರತ್ ಭೂಷಣ್ ಭಾರ್ಗವ ಮತ್ತು ಇತರರು (ಮೇಅನ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಚ ಸಂಹಿತೆಯ 39 ( 4) ನೇ ಪ್ರಕರಣದ ಹಿನ್ನೆಲೆಯಲ್ಲಿ, ಅಮಲ್ಜಾರಿ ನ್ಯಾಯಾಲಯಕ್ಕೆ ಯಾವುದೇ ವಿವೇಚಾನಾಧಿಕಾರ ಇರುವುದಿಲ್ಲ ಮತ್ತು ಸ್ವತ್ತಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯಕ್ಕೆ ಡಿಕ್ರಿಯನ್ನು ವರ್ಗಾವಣೆ ಮಾಡಬೇಕಾಗುತ್ತದೆ ಎಂಬುದನ್ನು ಒತ್ತಿ ಹೇಳಿದೆ.

20. ಮೇಲೆ ಹೇಳಲಾದ ಸಂಗತಿಗಳು ಮತ್ತು ಮಾಡಿದ ಚರ್ಚೆಯ ಹಿನ್ನೆಲೆಯಲ್ಲಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ ಮತ್ತು ಪ್ರಶ್ನಿತ ಆದೇಶವನ್ನು ವಜಾಗೊಳಿಸಲಾಗಿದೆ ಮತ್ತು ಮೊದಲ ಪ್ರತ್ಯರ್ಜಿದಾರರಾದ ಬ್ಯಾಂಕ್ ತನ್ನ ಬಾಕಿಯನ್ನು ವಸೂಲಿ ಮಾಡುವುದಕ್ಕೆ ಉದ್ದೇಶಿಸಿದ್ದರಿಂದ ಮೇಲೆ ಉಲ್ಲೇಖಿಸಿದ ಸರ್ವೆ ನಂ .206 ರಲ್ಲಿರುವ ಸ್ವತ್ತನ್ನು ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಶಿವಮೊಗ್ಗದಲ್ಲಿ ಅಧಿಕಾರ ವ್ಯಾಪ್ತಿ ನ್ಯಾಯಾಲಯದ ಮುಂದೆ ಕಾರ್ಯಗತಗೊಳಿಸುವುದಕ್ಕೆ ಡಿಕೆಯನ್ನು ವರ್ಗಾಯಿಸುವಂತೆ ಅಮಲ್ಜಾರಿ ನ್ಯಾಯಾಲಯಕ್ಕೆ ಪ್ರಸ್ತುತ ವಾಸ್ತವಿಕ ಅಂಶಗಳಲ್ಲಿ ಜಾರಿಗೊಳಿಸಲಾದ ಹೆಚ್ಚಿನ ನಿರ್ದೇಶನದೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 90 ನೇ ನಿಯಮದ 21 ನೇ ಕ್ರಮಾದೇಶದ ಅಡಿಯಲ್ಲಿ ದಾಖಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.ನಿಸ್ಸಂಶಯವಾಗಿ ಆದೇಶವನ್ನು ಜಾರಿಗೊಳಿಸಿದರಿಂದಾಗಿ ಹರಾಜು ಖರೀದಿದಾರನಿಗೆ ಬಾಧಕವುಂಟಾದರೂ ಅಧಿಕಾರ ವ್ಯಾಪ್ತಿಯ ಗೈರುಹಾಜರಿಯ ಹಿನ್ನೆಲೆಯಲ್ಲಿ ಹರಾಜು ಖರೀದಿದಾರನ ದುರಾವಸ್ಥೆಗೆ ಅನುಕಂಪ ಸೂಚಿಸುವ ಹೊರತಾಗಿ ಅವನಿಗೆ ಪರಿಹಾರವನ್ನು ಮಂಜೂರು ಮಾಡಲು ಸಾಧ್ಯವಾಗದು.

21. 2004 ನೇ ವರ್ಷದಲ್ಲಿನ ಐತೀರ್ಪಿಗೆ ಸಂಬಂಧಿಸಿದಂತೆ ಕಾರ್ಯಗತ ವ್ಯವಹಾರಗಳನ್ನು ಪರಿಗಣನೆಗೆ ತೆಗೆದುಕೊಂಡು, ಅಮಲ್ದಾರಿಗಾಗಿ ಡಿಕ್ರಿಯನ್ನು ವರ್ಗಾಯಿಸಲಾಗಿರುವ ಕಾರ್ಯಕಾರಿ ನ್ಯಾಯಾಲಯವು ತ್ವರಿತವಾಗಿ ವ್ಯವಹರಣೆಗಳನ್ನು ಪೂರ್ಣಗೊಳಿಸಬೇಕು.ಅಧೀನ ನ್ಯಾಯಾಲಯವು, ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ವಾರಗಳ ಅವಧಿಯೊಳಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ

39 ( 4) ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯಕ್ಕೆ ಅಮಲ್ಜಾರಿಗಾಗಿ ಡಿಕ್ರಿಯನ್ನು ವರ್ಗಾಯಿಸುವುದು.ತದನಂತರದಲ್ಲಿ, ಅಮಲ್ದಾರಿ ನ್ಯಾಯಾಲಯವು, ಶಿವಮೊಗ್ಗದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯಕ್ಕೆ ವ್ಯವಹರಣೆಗಳನ್ನು ವರ್ಗಾಯಿಸಿದ ಮೇಲೆ ಎಲ್ಲ ನ್ಯಾಯಯುತ ವಿನಾಯಿತಿಗೊಳಪಟ್ಟು ವರ್ಗಾವಣೆಗೊಂಡ ದಿನಾಂಕದಿಂದ ಎಂಟು ತಿಂಗಳಿಗಿಂತ ಹೆಚ್ಚು ಅವಧಿಯನ್ನು ಮೀರದಂತೆ ವ್ಯವಹರಣೆಗಳನ್ನು ಚ ಪೂರ್ಣಗೊಳಿಸಲು ಪ್ರಯತ್ನಿಸತಕ್ಕದ್ದು.

22. ರಿಟ್ ಅರ್ಜಿಯನ್ನು ಪುರಸ್ಕರಿಸಲಾದ ಹಿನ್ನೆಲೆಯಲ್ಲಿ, ಐ.ಎ.ಸಂ .1/2017 ಅನ್ನು ಅನಗತ್ಯವೆಂದು ಭಾವಿಸಿ ವಜಾಗೊಳಿಸಲಾಗಿದೆ.